ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಅಂತರ ರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 20/10/2019

# ಬ್ರೆಕ್ಸಿಟ್ ವಿಳಂಬಕ್ಕೆ ಸಂಸತ್ ಬೆಂಬಲ

**ಲಂಡನ್:** ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರನಡೆಯುವ ಬ್ರೆಕ್ಸಿಟ್ ಪ್ರಕ್ರಿಯೆಗೆ ಬೆಂಬಲ ನೀಡಬೇಕೆಂಬ ಪ್ರಧಾನಿ ಬೋರಿಸ್ ಜಾನ್ಸನ್‌ರ ಮನವಿಗೆ ಸಂಸದರು ಮಣೆ ಹಾಕದೆ ವಿಳಂಬದ ಗೊತ್ತುವಳಿ ಪರವಾಗಿ ಮತ ಚಲಾಯಿಸಿದ್ದಾರೆ. 37 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ವಾರಾಂತ್ಯ ಶನಿವಾರ ಅಧಿವೇಶನ ನಡೆಸಿದ ಬ್ರಿಟನ್ ಸಂಸತ್ತು, ಬ್ರೆಕ್ಸಿಟ್ ವಿಳಂಬ ಪ್ರಕ್ರಿಯೆಗೆ ಸಾಕ್ಷಿಯಾಯಿತು. ಇದರಿಂದ ಜಾನ್ಸನ್‌ರಿಗೆ ಇನ್ನೊಂದು ಹಿನ್ನಡೆಯಾಗಿದೆ.

ಪ್ರತಿಪಕ್ಷ ಮಂಡಿಸಿದ ತಿದ್ದುಪಡಿ ಪರವಾಗಿ 322 ಹಾಗೂ ಅದರ ವಿರುದ್ಧ 306 ಮತಗಳು ಬಿದ್ದವು. ಈ ಘಟನೆಯ ಮಹತ್ವದಿಂದಾಗಿ 'ಸೂಪರ್ ಶನಿವಾರ' ಎಂದು ಕರೆಯಲಾಗಿರುವ ವಿಶೇಷ ಅಧಿವೇಶನದಲ್ಲಿ ಕನ್ಸರ್ವೇಟಿವ್ ಪಕ್ಷದ ಸದಸ್ಯ ಓಲಿವರ್ ಲೆಟ್ವಿನ್ ಮಂಡಿಸಿದ್ದ ಈ ತಿದ್ದುಪಡಿಗೆ ಬೆಂಬಲ ವ್ಯಕ್ತವಾಯಿತು. ಅಕ್ಟೋಬರ್ 31 ರ ಗಡುವು ಜಾರಿಯಲ್ಲಿರುವ ತನಕ ಬ್ರೆಕ್ಸಿಟ್ ಬಗ್ಗೆ ಯಾವುದೇ ಹೊಸ ಒಪ್ಪಂದಕ್ಕೆ ಸಮ್ಮತಿ ಸೂಚಿಸದಿರಲು ಈ ತಿದ್ದುಪಡಿಯಲ್ಲಿ ಪ್ರಸ್ತಾಪಿಸಲಾಗಿತ್ತು.



- **ನಾಳೆ ಮತ್ತೆ ಹೊಸ ಕ್ರಮ**
- **ಮಂಗಳವಾರ ಮತದಾನವೆಂದ ಪ್ರಧಾನಿ ಜಾನ್ಸನ್**

ಅಕ್ಟೋಬರ್ ಕೊನೆಯೊಳಗೆ ಬ್ರೆಕ್ಸಿಟ್ ಪ್ರಕ್ರಿಯೆ ಪೂರ್ಣಗೊಳ್ಳಬೇಕೆಂಬ ಗಡುವನ್ನು ವಿಸ್ತರಿಸಬೇಕೆಂದು ಐರೋಪ್ಯ ಒಕ್ಕೂಟಕ್ಕೆ ಕೋರುವುದಿಲ್ಲ ಎಂದು ಸಂಸತ್‌ನಲ್ಲಿ ಶನಿವಾರ ಮತದಾನ ನಡೆದ ಬೆನ್ನಲ್ಲೇ ಜಾನ್ಸನ್ ಹೇಳಿದ್ದಾರೆ. ಶನಿವಾರದ ಮತದಾನದಿಂದ ತಾನು ಹತಾಶನಾಗಿಲ್ಲ ಎಂದು ಹೇಳಿರುವ ಜಾನ್ಸನ್, ತಮ್ಮ ಹೊಸ ಒಡಂಬಡಿಕೆ ಸಂಬಂಧ ಸರ್ಕಾರ ಅಗತ್ಯ ಕಾನೂನನ್ನು ಸೋಮವಾರ ಮಂಡಿಸಲಿದೆ ಎಂದೂ ತಿಳಿಸಿದ್ದಾರೆ. ಮಂಗಳವಾರ ಮತದಾನ ನಡೆಯಲಿದೆ ಎಂದಿದ್ದಾರೆ.

**ಏನಿದು ಬ್ರೆಕ್ಸಿಟ್?:** 28 ದೇಶಗಳು ರಚಿಸಿಕೊಂಡಿರುವ ರಾಜಕೀಯ ಮತ್ತು ಆರ್ಥಿಕ ಸಂಘಟನೆಯೇ ಐರೋಪ್ಯ ಒಕ್ಕೂಟ. ಇದಕ್ಕೆ ಬ್ರಿಟನ್ 1973ರಲ್ಲಿ ಸೇರ್ಪಡೆಯಾಯಿತು. ಈ ಸೇರ್ಪಡೆಗೆ 1975ರಲ್ಲಿ ನಡೆದ ಜನಮತ ಗಣನೆ ಅಂಗೀಕಾರ ನೀಡಿತು. 1980 ಮತ್ತು 90ರ ದಶಕದಿಂದಲೇ ಐರೋಪ್ಯ ಒಕ್ಕೂಟದಿಂದ ಹೊರಬರಬೇಕು ಎಂಬ ಕೂಗು ಎಡ ಚಿಂತನೆಯ ಪಕ್ಷಗಳಿಂದ ಕೇಳಿಬರ ತೊಡಗಿದವು. ಬ್ರೆಕ್ಸಿಟ್ (ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬರುವುದು) ಹೆಸರಿನ ಆಂದೋಲನಗಳು ನಡೆದವು. 2015ರ ಚುನಾವಣೆಯಲ್ಲಿ ಈ ಅಗ್ರಹವನ್ನು ಡೇವಿಡ್ ಕ್ಯಾಮರನ್ ಚುನಾವಣಾ ಪ್ರಣಾಳಿಕೆಯಲ್ಲೂ ಸೇರಿಸಿದರು. ಆಶ್ವಾಸನೆಯಂತೆ 2016ರ ಜೂನ್ 23ರಂದು ಜನಮತ ಗಣನೆ ನಡೆದು ಶೇ. 52 ಮಂದಿ ಬ್ರೆಕ್ಸಿಟ್ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಇದರಿಂದ ಬ್ರೆಕ್ಸಿಟ್‌ಗೆ ವಿರುದ್ಧ ನಿಲುವು ಹೊಂದಿದ್ದ ಪ್ರಧಾನಿ ಡೇವಿಡ್ ಕ್ಯಾಮರಾನ್‌ಗೆ ಮುಖಭಂಗವಾಗಿ ಅವರು ರಾಜೀನಾಮೆ ನೀಡುವಂತಾಯಿತು. ನಂತರ ಥೆರೇಸಾ ಮೇ ಪ್ರಧಾನಿಯಾದರು. ಒಂದು ವರ್ಷದ ಬಳಿಕ ಮಧ್ಯಂತರ ಚುನಾವಣೆ ಘೋಷಣೆ ಮಾಡಿದರು. ಆದರೆ, ಅವರ ಪಕ್ಷಕ್ಕೆ ಚುನಾವಣೆಯಲ್ಲಿ ಸರಳ ಬಹುಮತ ದೊರೆಯಲಿಲ್ಲ. 2017ರ ಮಾರ್ಚ್ 29ರಂದು ಬ್ರಿಟನ್ ಸರ್ಕಾರ ಸಂವಿಧಾನದ 50ನೇ ವಿಧಿಯನ್ನು (ಐರೋಪ್ಯ ಒಕ್ಕೂಟದ ಒಪ್ಪಂದ) ಕೈಬಿಡುವ ಪ್ರಸ್ತಾವನೆ ಮಾಡಿತ್ತು. ಇದರ ಅನ್ವಯ 2019ರ ಮಾರ್ಚ್ 29ರಂದು ಐರೋಪ್ಯ ಒಕ್ಕೂಟದಿಂದ ಹೊರಬರಬೇಕಿತ್ತು. ಈ ಗಡುವಿನೊಳಗೆ ಐರೋಪ್ಯ ಒಕ್ಕೂಟದಿಂದ ಹೊರಬರಲು ವಿಫಲವಾಗಿದ್ದರಿಂದ ಥೆರೇಸಾ ಮೇ 2019 ಮೇ 24ರಂದು ಪದತ್ಯಾಗ ಮಾಡಿದರು.